'ಏನಾದ್ರೆ ಏನ್ರೀ, ಹೇಗೂ ದೇವರದ್ದಲ್ವೆ!

'ಅಂಥ ದೇವರದ್ದನ್ನು ಕದಿಯೋಣ ಅಂದ್ರೆ ಏನ್ರೀ– ಅದೂ ನಮ್ಮೂರಿನಲ್ಲಿ!'

'ಪಾಪ, ಮಹಾಪಾಪ!– ಅಪರಾಧ, ನಷ್ಟ, ಮಣ್ಣು ಮಸಿ ಅನ್ನೋದು ಇರ್ಲಿ.'

'ಅಲ್ವೆ ಅಲ್ವೇ, ಶಾಂತಂ ಪಾಪಂ, ಶಾಂತಂ ಪಾಪಂ! ಬಾಯಲ್ಲಿ ಕೂಡ ಹೇಳಬಾರ್ದು, ಅಂಥ ಘೋರಪಾಪ! ಮಾಡಿದೋರು ರೌರವ ನರಕ ಕುಂಭೀಪಾಕಕ್ಕೆ ಖಂಡಿತ ಹೋಗೇ ಹೋಗ್ತಾರೆ. ಬಿಡೋದಿಲ್ಲ.'

'ಹಾಗೂ ಎಂಥಾ ದುಷ್ಕೃತ್ಯ, ಹೀನಕೃತ್ಯ, ನಾಚಿಕೆಗೇಡಿಂದು, ಎಷ್ಟು ಕೋಪ ತರುತ್ತೆ– ಅಬ್ಬಬ್ಬ ಕೇಳ್ತಾ ಇದ್ದ ಹಾಗೇ ಮೈಯೆಲ್ಲ ಉರಿದುಹೋಗುತ್ತೆ.'

'ಹೌದು, ಹೌದು, ನಿಸ್ಸಂದೇಹವಾಗಿ, ಯಾರಿಗೆ ತಾನೆ ಆಗೋದಿಲ್ಲ ಹೇಳಿ.'

'ಇಂಥ ನೀಚಕೃತ್ಯ ಮಾಡಿದ ನೀಚರು, ಪರಮ ಚಂಡಾಲರು, ಯಾರಂತೆ? ಗೊತ್ತಾಗಿದೆಯೆ? ತಪ್ಪಿಸಿಕೊಳ್ಳೋದಕ್ಕೆ ಆಗುತ್ತದೆಯೆ, ಎಲ್ಲಾದರೂ.'

'ಒಡವೆ ಅದು ಇದು?'

'ಮಾಲು ಸಮೇತ ಸಿಕ್ಕಿಬಿದ್ದಿದ್ದಾನಂತೆ.'

'ಅಂಥ ಸತ್ಯವಂತ ದೇವರು, ನಮ್ಮಪ್ಪಾ ಎಲ್ಲಾ ನಿನ್ನ ಇಚ್ಛೆಕಣೋ, ನಿನ್ನ ಆಟ ಕಣಪ್ಪಾ! ನ್ಯಾಯವಾಗಿ ಕಳ್ಳನ ಕೈಯೇ ಸೇದಿಹೋಗಬೇಕಾಗಿತ್ತು. ಮುಟ್ಟಿದ ತಕ್ಷಣ. ಸದ್ಯ ಸಿಕ್ಕಾರೂ ಬಿದ್ದನಲ್ಲ... ಕಲಿಗಾಲ ಅಲ್ವೆ ಎಷ್ಟಾದರೂ.'

'ಯಾರಂತೆ ಕಳ್ಳ?'

'ಮೂಗ.'

'ಆ? ಮೂಗನೆ? ಅಯ್ಯೋ ಬೇವಾರಸಿ ಮುಂಡೇಮಗನೇ, ಅವನಿಗೇನು ಬಂದಿತಪ್ಪ ಅಂಥ ದೊಡ್ಡ ರೋಗ. ಸುಮ್ಮನೆ ಭಿಕ್ಷೆಬೇಡಿ ತಿಂದುಕೊಂಡು ಬಿದ್ದಿರಲಾರದೆ? ನಾವೆಲ್ಲ ಅಷ್ಟು ಚೆನ್ನಾಗಿ ನೋಡಿಕೋತಾ ಇದ್ವು ಅವನನ್ನ. ಅವನು ಬಂದು ಬೇಡಿದಾಗಲೆಲ್ಲ ಒಂದು ತುತ್ತು ತಪ್ಪದೆ ಹಾಕ್ತ ಇದ್ವು, ಅವನ ಒಡಕು ಮಡಕೆಗೆ. ಎಷ್ಟೋ ದಿನ ನಮ್ಮ ಜಗಲಿಮೇಲೆ ಬಿದ್ದುಕೊಂಡಿರೋದಕ್ಕೂ ಜಾಗಕೊಡ್ತಾ ಇದ್ವು. ಆಗ ಈಗ ಒಂದು ಚೂರು ಹರಿದ ಪರಿದ ಬಟ್ಟೆಬರೇನೂ ಕೊಡ್ತಾ ಇದ್ವು ಪಾಪ ಅಂತ. ಇನ್ನೂ ಎಷ್ಟೋ ಜನ ಹಾಗೇ ಮಾಡ್ತಾ ಇದ್ರು ಅನ್ನಿ.'

'ಹೌದು, ನಾವೂ ಅಷ್ಟು ತಂಗಳು ಬೆಂಗಳು ಹಾಕ್ತಾ ಇದ್ವು. ಮಿಕ್ಕಿದ್ರೆ, ಅವನು ಬಂದಾಗಲೆಲ್ಲ. ಒಂದು ಸಾರಿ ಚಳಿಗಾಲದಲ್ಲಿ ಅಯ್ಯೋ ಪಾಪ ಹೊದೆಯೋದಕ್ಕೆ ಇಲ್ಲ ಅಂತ ಸ್ವಲ್ಪ ಹೋದ ಹಳೇ ಪಂಚೆನೂ ಕೊಟ್ಟಿದ್ವು. ಇನ್ನೂ ಯಾರ್‍ಯಾರು ಏನೇನು ಕೊಡ್ತಾ ಇದ್ರೊ ಮಾಡ್ತಾ ಇದ್ರೊ– ನಮ್ಮೂರಿನ ಜನ ಬಹಳ ಒಳ್ಳೆಯೋರು. ಅವನಿಗೇನಾಗಿತ್ತು ಅರೆ ಅಂತ – ಹೀಗೆ ಮಾಡೋದಕ್ಕೆ.'

'ಥೂ ಕಳ್ಳಬಡ್ಡಿಮಗನೆ! ಇಷ್ಟೆಯೇ, ನಾವೇನೋ ಅವನು ಗತಿಯಿಲ್ಲದೋನು. ಆದರೆ ಸತ್ಯವಂತ. ಅಂತ ಅಂದುಕೊಂಡಿದ್ವಲ್ಲ.'

'ಆ, ಎಂಥೋನು ನೋಡಿ! ಯೋಚಿಸೋದಕ್ಕೂ ಆಗೋದಿಲ್ಲ. ಅವನಿಗೇನು ಕೊಟ್ಟ ದೇವರು ಅಂಥ ಬುದ್ಧೀನಾ ಅಂತೀನಿ..'

'ದೇವರು ಏನ್ರಿಕೊಡೋದು? ಒಳಗಿದ್ರೆ ಕೆಟ್ಟಚಾಳಿ, ಹೊರಗೆ ಬಂದೇಬರುತ್ತೆ ಒಂದಲ್ಲ ಒಂದು ದಿನ. ಎಲ್ಲಿ ಹೋಗುತ್ತೆ? ಹೀನಸುಳಿ ಇದ್ರೆ ಬೋಳಿಸಿದರೆ ಎಲ್ಲಿ ಹೋಗುತ್ತೈ ಅಂತ. ಹುಟ್ಟಿನಿಂದ ಬಂದದ್ದು ಚಟ್ಟದ ಮೇಲೆ ಹೋಗೋದು ಅನ್ನೋದಿಲ್ವೆ? ಈವರೆಗೇ ಏನೇನು ಮಾಡ್ತಾ ಇದ್ನೋ,